**ಶಾಲಾ ಮಕ್ಕಳಿಗೆ ಸಕಾಲದಲ್ಲಿ ಸಮವಸ್ತ್ರಗಳ ಪೂರೈಕೆ**

**708 (1106) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)** : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಲಾ ಮಕ್ಕಳಿಗೆ ಸಮವಸ್ತ್ರವನ್ನು ಒದಗಿಸಲು ಸರಕಾರ ಮಾಡುತ್ತಿರುವ ಒಟ್ಟು ವಾರ್ಷಿಕ ವೆಚ್ಚ ಎಷ್ಟು; ಇವರ ಸಕಾಲಿಕ ವ್ಯವಸ್ಥೆಯ ವಿವರಗಳೇನು;

ಆ) ಸಮವಸ್ತ್ರ ಪೂರೈಕೆಯನ್ನು ಯಾವ ಮೂಲಗಳಿಂದ ಪಡೆದುಕೊಳ್ಳಲಾಗುತ್ತಿದೆ (ವಿವರ ನೀಡುವುದು); ಸರಕಾರಿ ಸ್ವಾಮ್ಯದ ಕೈಮಗ್ಗ ಅಭಿವೃದ್ಧಿ ನಿಗಮದವರಿಗೆ ವಹಿಸಿರುವ ಸಮವಸ್ತ್ರ ಪೂರೈಕೆಯ ಪ್ರಮಾಣದ ವಿವರಗಳೇನು;

ಇ) ಸಮವಸ್ತ್ರವನ್ನು ಪೂರೈಕೆ ಮಾಡಿದ ಕೆ.ಹೆಚ್.ಡಿ.ಸಿ. ಯವರಿಗೆ ಸರಕಾರ ಪಾವತಿಸಲು ಬಾಕಿ ಇರುವ ಹಣದ ಮೊತ್ತ ಎಷ್ಟು; ಅದರ ಸಂದಾಯಕ್ಕೆ ಸರಕಾರದ ಕ್ರಮಗಳೇನು?

ಈ) ಸಮವಸ್ತ್ರ ಪೂರೈಕೆಯ ಪೂರ್ಣಪ್ರಮಾಣದ ಜವಾಬ್ದಾರಿಯನ್ನು ಕೆ.ಹೆಚ್.ಡಿ.ಸಿ.ಯವರಿಗೆ ವಹಿಸಿ ವಾರ್ಷಿಕ ಪೂರೈಕೆಯನ್ನು ನಿಗದಿತವಾಗಿ ಮುಂದಾಗಿ ಪಡೆದುಕೊಳ್ಳುವ ಬಗ್ಗೆ ಸರಕಾರದ ಕ್ರಮಗಳೇನು?

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)** :

ಅ) ಒಟ್ಟು ವಾರ್ಷಿಕ ವೆಚ್ಚ ರೂ.83.00 ಕೋಟಿಗಳು. ಸೂಕ್ತ ಸಮಯದಲ್ಲಿ ಸರಬರಾಜಿಗೆ ಆದೇಶ ನೀಡಲಾಗುತ್ತಿದೆ. ಹಾಗೂ ಫಲಾನುಭವಿಗಳಿಗೆ ಸೂಕ್ತ ಸಮಯದಲ್ಲಿ ಸಮವಸ್ತ್ರಗಳನ್ನು ಸರಬರಾಜು ಮಾಡಲಾಗುತ್ತಿದೆ. (ಶಾಲಾ ಪ್ರಾರಂಭವಾಗುವ ವೇಳೆಗೆ)

ಆ) 1. ಕೆ.ಹೆಚ್.ಡಿ.ಸಿ.

2. ಕೆ.ಎಸ್.ಪಿ.ಡಿ.ಸಿ

3. ಮೇ:ಸುಜಕಿ ಟೆಕ್ಸ್ ಟೈಲ್ಸ್ ಲಿಮಿಟೆಡ್, ಬಿಲ್ವಾರ, ರಾಜಸ್ಥಾನ. (ಟೆಂಡರ್ ಮೂಲಕ) 2011–12ನೇ ಸಾಲಿನಲ್ಲಿ ಕೆ.ಹೆಚ್.ಡಿ.ಸಿ ಸಂಸ್ಥೆಗೆ ಬೆಂಗಳೂರು ಹಾಗೂ ಗುಲ್ಬರ್ಗಾ ವಿಭಾಗಗಳನ್ನು ವಹಿಸಿದ್ದು, ಸದರಿ

ಸಂಸ್ಥೆಯ ಆ ಎರಡು ವಿಭಾಗಗಳಿಗೆ ಪೂರೈಸಿರುವ ಸಮವಸ್ತ್ರದ ಪ್ರಮಾಣ ರೂ.29.04 ಲಕ್ಷ ಸೆಟ್ಟುಗಳು.

ಇ) 2011–12ನೇ ಸಾಲಿನಲ್ಲಿ ಕೆ.ಹೆಚ್.ಡಿ.ಸಿ.ಯವರಿಗೆ ಸಮವಸ್ತ್ರ ಪೂರೈಕೆ ಮಾಡಿದ ಬಾಬ್ತು ಹಣ ಪೂರ್ತ ಸಂದಾಯವಾಗಿದೆ. ಯಾವುದೂ ಬಾಕಿ ಇರುವುದಿಲ್ಲ.

ಈ) ಕೆ.ಹೆಚ್.ಡಿ.ಸಿ.ಯು ನೇಕಾರರಿಂದ ಉತ್ಪಾದಿಸುತ್ತಿರುವ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಎರಡು ವಿಭಾಗಗಳ ಸಮವಸ್ತ್ರ ಪೂರೈಕೆ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗುತ್ತಿದೆ. ಇನ್ನೊಂದು ಸರ್ಕಾರದ ಉದ್ಯಮವಾದ ಕೆ.ಎಸ್.ಪಿ.ಡಿ.ಸಿ ರವರಿಗೆ ಬೆಳಗಾವಿ ವಿಭಾಗದ ಸಮವಸ್ತ್ರ ಪೂರೈಕೆ ಜವಾಬ್ದಾರಿಯನ್ನು ವಹಿಸಲು ಈಗಾಗಲೇ ಕೆ.ಟಿ.ಪಿ.ಪಿ ನಿಯಮಗಳಡಿ ದಿನಾಂಕ: 03.12.2011ರ ಅಧಿಸೂಚನೆಯನ್ವಯ ವಿನಾಯ್ತಿ ಪಡೆಯಲಾಗಿದೆ. ಮೈಸೂರು ವಿಭಾಗಕ್ಕೆ ಸಂಬಂಧಿಸಿದಂತೆ ಟೆಂಡರ್ ಕರೆಯಲು ಕ್ರಮ ಕೈಗೊಳ್ಳಲಾಗಿದೆ.

**ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ನಿರ್ವಹಣೆಯ ಯೋಜನೆ**

**706 (1104) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)** : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ನಿರ್ವಹಣೆಗೆ ಸರಕಾರದ ಯೋಜನೆಗಳು ಯಾವುವು;

ಆ) ಈ ಯೋಜನೆಗಳಿಗಾಗಿ ಸರಕಾರ ಮಾಡುತ್ತಿರುವ ವೆಚ್ಚದ ಮೊತ್ತ ಎಷ್ಟು; ರಾಜ್ಯ ಮತ್ತು ಕೇಂದ್ರ ಸರಕಾರದ ಅನುದಾನವೆಷ್ಟು (ವಿವರ ನೀಡುವುದು);

ಇ) ಸದರಿ ಉದ್ದೇಶಗಳಿಗಾಗಿ ನಿಗದಿಯಾದ ಅನುದಾನದ ಮೊತ್ತವನ್ನು ಸಕಾಲಿಕವಾಗಿ ಬಳಕೆ ಮಾಡಿ ಗ್ರಾಮೀಣ ಜನರಿಗೆ ಅನುಕೂಲ ಮಾಡಿಕೊಡುವಲ್ಲಿ ಕೊರತೆ ಕಂಡು ಬಂದಿದೆಯೇ;

ಈ) ಗ್ರಾಮೀಣ ಪ್ರದೇಶಗಳಿಗೆ ಪೂರ್ಣ ಪ್ರಮಾಣದಲ್ಲಿ ಕುಡಿಯುವ ನೀರು ಒದಗಿಸಿಕೊಡಲಾಗಿದೆಯೇ; ಇಲ್ಲವಾದಲ್ಲಿ, ಅದಕ್ಕೆ ಕಾರಣಗಳೇನು (ವಿವರ ನೀಡುವುದು)?